**ಪ್ರ. ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ತರೀಕೆರೆ.**

**ಸಿ.ಸಿ .ಸಂಖ್ಯೆ ::176/2019**

**ಸಾಕ್ಷಿದಾರರ ಹೆಸರು** : ಯಶೋಧಮ್ಮ **DW-1**

**ಗಂಡನ ಹೆಸರು** : ಬಸವರಾಜಪ್ಪ

**ವಯಸ್ಸು** : 51 ವರ್ಷ

**ಉದ್ಯೋಗ** : ಗೃಹಿಣಿ

**ವಾಸಸ್ಥಳ** : ಕೋಡಿಕ್ಯಾಂಪ್, ತರೀಕೆರೆ

**ದಿನಾಂಕಃ03-01-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಆರೋಪಿಯ ಪರ ಶ್ರೀ. SNM ವಕೀಲರಿಂದ ::**

ನಾನು 2013 ರಲ್ಲಿ ತರೀಕೆರೆ ಪುರಸಭೆಗೆ ಸದಸ್ಯರಾಗಿ ಚುನಾಯಿತಗೊಂಡಿದ್ದು, 2015 ನೇ ಸಾಲಿನಲ್ಲಿ ಇತರೇ ಸದಸ್ಯರ ಸಮ್ಮತಿ ಮೇರೆಗೆ ಅಧ್ಯಕ್ಷಳಾಗಿರುತ್ತೇನೆ. ಆ ಸಮಯದಲ್ಲಿ ತರೀಕೆರೆಯ ಮಾಜಿ ಶಾಸಕರಾದ ಶಿವಶಂಕರಪ್ಪ ರವರ ಹೇಳಿಕೆಯ ಮೇರೆಗೆ ನಾನು ಅಧ್ಯಕ್ಷಳಾದ ಮೇಲೆ ಅವರ ಸೂಚನೆಯಂತೆ ಸರಿಯಾದ ಸಮಯದಲ್ಲಿ ಅಧ್ಯಕ್ಷತೆ ಸ್ಥಾನವನ್ನು ಬೇರೆಯವರಿಗೆ ಬಿಟ್ಟು ಕೊಡಲು 2 ಸಹಿ ಮಾಡಿರುವ ನನ್ನ ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಚೆಕ್ ಗಳನ್ನು ನೀಡಿರುತ್ತೇನೆ. ಅವರು ಹೇಳಿದ ನನ್ನ ಅಧ್ಯಕ್ಷತೆ ಮುಗಿಯುವ ಸಮಯದಲ್ಲಿ ಮುಂದಿನ ಚುನಾವಣೆಗೆ ಕೇವಲ 5 ತಿಂಗಳ ಬಾಕಿ ಇದ್ದ ಕಾರಣ ಇತರೇ ಸದಸ್ಯರ ಕೋರಿಕೆಯ ಮೇರೆಗೆ ನಾನು ಅಧ್ಯಕ್ಷ ಸ್ಥಾನದಲ್ಲಿಯೇ ಮುಂದಿನ ಚುನಾವಣೆ ಬರುವವರೆಗೂ ಮುಂದುವರೆದಿರುತ್ತೇನೆ. ಈ ಮಧ್ಯದಲ್ಲಿ ಪಿರ್ಯಾದುದಾರರ ಹೆಂಡತಿ ಸುನಿತಾ ಎನ್ನುವವರು ಸಹ ನನ್ನ ಜೊತೆ ಪುರಸಭೆಯ ಸದಸ್ಯರಾಗಿದ್ದು, ನನ್ನ ಅಧ್ಯಕ್ಷತೆಯ ಅವಧಿ ಮುಗಿದ ನಂತರದಲ್ಲಿ ಅವರು ಅಧ್ಯಕ್ಷರಾಗಬೇಕಿತ್ತು, ಆದರೆ ಮೇಲೆ ಹೇಳಿದ ಕಾರಣಕ್ಕೆ ನಾನೇ ಅಧ್ಯಕ್ಷಳಾಗಿ ಮುಂದುವರೆದಿರುತ್ತೇನೆ. ಸದರಿ ವಿಚಾರದ ಬಗ್ಗೆ ಪಿರ್ಯಾದುದಾರರ ಹೆಂಡತಿಗೆ ಅಸಮಾಧಾನವಿದ್ದ ಕಾರಣ ಮಾಜಿ ಶಾಸಕರಾದ ಶಿವಶಂಕರಪ್ಪ ರವರು ಮೇಲೆ ಹೇಳಿದ ನನ್ನ 2 ಚೆಕ್ ಗಳನ್ನು ಪಿರ್ಯಾದುದಾರರ ಹೆಂಡತಿಗೆ ನೀಡಿದ್ದು, ಸದರಿ 2 ಚೆಕ್ ಗಳನ್ನು ಪಿರ್ಯಾದುದಾರರ ಹೆಂಡತಿ ಪಿರ್ಯಾದುದಾರರ ಮುಖಾಂತರ ಬ್ಯಾಂಕ್ ಗೆ ಹಾಜರುಪಡಿಸಿ ಈ ಪ್ರಕರಣಗಳನ್ನು ಹೂಡಿರುತ್ತಾರೆ.

ನನ್ನ ಮತ್ತು ಪಿರ್ಯಾದುದಾರರ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ. ನಾನು ಪಿರ್ಯಾದುದಾರರಿಂದ ಯಾವುದೇ ಹಣವನ್ನು ಸಾಲವಾಗಿ ಯಾವತ್ತು ಸಹ ಪಡೆದಿರುವುದಿಲ್ಲ. ಮೇಲೆ ಹೇಳಿದಂತೆ ಪಿರ್ಯಾದುದಾರರು ನನ್ನ ಸಹಿ ಮಾಡಿರುವ ಖಾಲಿ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಆದಕಾರಣ ನಾನು ಪಿರ್ಯಾದುದಾರರಿಗೆ ಯಾವುದೇ ಹಣ ನೀಡಲು ಭಾದ್ಯಸ್ಥಳಾಗಿರುವುದಿಲ್ಲ, ನನ್ನನ್ನು ಈ ಪ್ರಕರಣದಿಂದ ಬಿಡುಗಡೆ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಪಡಿಸಿದ್ದು, ಈಗ ಅವುಗಳನ್ನು ನೋಡುತ್ತಿದ್ದು, ಈ ಕೆಳಕಂಡಂತೆ ಗುರುತಿಸಲಾಯಿತು.

| Sl.No. | Documents | Exhibits |
|---|---|---|
| 1 | ದಿನಾಂಕ 22.11.2014, 08.08.2014, 14.03.2014, 10.03.2015, 07.09.2015, 05.12.2016, 15.07.2016, 21.05.2016, 18.05.2016, 01.08.2017, 22.11.2018 ರ ಟಿ ಎಂ ಸಿ ತರೀಕೆರೆಯ ಸಭಾ ನಡುವಳಿಯ ದೃಡೀಕೃತ ನಕಲುಗಳನ್ನು ಕ್ರಮವಾಗಿ | Ex.D1 ರಿಂದ 11 |

**:: ಪಾಟೀ ಸವಾಲು :: ಪಿರ್ಯಾದುದಾರರ ಪರ ವಕೀಲರಿಂದ ::**

**(ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಕಾಲಾವಕಾರಣ ಕೋರಿದ ಕಾರಣ, ಪಾಟೀ ಸವಾಲನ್ನು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಪ್ರ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ತರೀಕೆರೆ.

ಸಾಕ್ಷಿಯ ಸಹಿ::